# ಕರ್ನಾಟಕ ವಿಧಾನ ಪರಿಷತ್ತು

## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ-72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

*******

**ಪ್ರಶ್ನೆ:** ಮೆಟ್ರೋ 2ನೇ ಹಂತದ ಕಾಮಗಾರಿಯಲ್ಲಿ ಶಿವಾಜಿ ನಗರದಿಂದ ನಾಗವಾರದವರೆಗೆ ಅಂಡರ್ ಗ್ರೌಂಡ್ ಮಾರ್ಗ ನಿರ್ಮಾಣಕ್ಕಾಗಿ ಭೂಮಾಲೀಕರಿಂದ ಧೀರ್ಘಕಾಲದ ಗುತ್ತಿಗೆಗೆ ಪಡೆದು ನೋಂದಾಯಿತ ಒಪ್ಪಂದ (ರಿಜಿಸ್ಟರ್ಡ್ಡ್) ಮಾಡಿಕೊಂಡು ವ್ಯವಹಾರ ನಡೆಸುತ್ತಿರುವ ಗುತ್ತಿಗೆದಾರರಿಗೆ ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದಿಂದ ಕಾನೂನಿನಂತೆ ಪರಿಶೀಲಿಸಿ, ಭೂಪರಿಹಾರ ನೀಡಲು ಕ್ರಮವಹಿಸುವಂತೆ ಮಾನ್ಯ ಉಚ್ಚನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 16258-259/2019 ದಿನಾಂಕ:14.01.2020ರಂದು ಆದೇಶಿಸಿದ್ದರೂ ಇದುವರೆವಿಗೂ ಗುತ್ತಿಗೆದಾರರಿಗೆ ಭೂ ಪರಿಹಾರ ನೀಡಲು ಯಾವುದೇ ಕ್ರಮಕೈಗೊಂಡಿರುವುದಿಲ್ಲ ಹಾಗೂ 140ನೇ ಅಧಿವೇಶನದಲ್ಲಿ ಚರ್ಚಿಸಿದ್ದರೂ ಸಹ ಸಮಸ್ಯೆ ಪರಿಹರಿಸದಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯ ಬಯಸುತ್ತೇನೆ.

***<>***

**ಉತ್ತರ:** ಬೆಂಗಳೂರು ಮೆಟ್ರೋ ರೈಲು ಯೋಜನೆಗಾಗಿ ನಾಗವಾರ ಗ್ರಾಮದ ಸರ್ವೆ ನಂ.135/1 ರಲ್ಲಿ 100.66 ಚ.ಮೀ. ಮತ್ತು ಸರ್ವೆ ನಂ:135/2 ರಲ್ಲಿ 655.19 ಚ.ಮೀ. ವಿಸ್ತೀರ್ಣವನ್ನು ಭೂಸ್ವಾಧೀನಪಡಿಸಲು ಕೆ.ಐ.ಎ.ಡಿ. ಕಾಯ್ದೆ 1966ರ ಕಲಂ 28(4) ರಡಿ ಅಂತಿಮ ಅಧಿಸೂಚನೆಯನ್ನು ದಿನಾಂಕ:17.01.2019 ರಂದು ಹೊರಡಿಸಲಾಗಿದೆ.

ಖಾತೆದಾರರ ಕಾಲಂ ನಲ್ಲಿ (1) ಶ್ರೀಆರ್.ಚಂದ್ರಶೇಖರ್ ಬಿನ್ ಕೃಷ್ಣಯ್ಯ ಮತ್ತು (2) ಶ್ರೀಮತಿ ಸರಸ್ವತಿ ಕೋಂ ಕೆ.ಚಂದ್ರಶೇಖರ್ ಇವರುಗಳ ಹೆಸರನ್ನು ನಮೂದಿಸಲಾಗಿದ್ದು, ಅನುಭವದಾರರ ಕಾಲಂನಲ್ಲಿ ಇಂಡಿಯನ್ ಪೆಟ್ರೋಲ್ ಬಂಕ್ ಹೆಸರನ್ನು ನಮೂದಿಸಲಾಗಿದೆ.

ಈ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಬಿ.ಎಂ.ಆರ್.ಸಿ.ಎಲ್. ರವರು ದಿನಾಂಕ: 04.01.2020ರಂದು 655.19 ಚ.ಮೀ. ವಿಸ್ತೀರ್ಣಕ್ಕೆ ರೂ.10,71,05,091/- ಹಾಗೂ 100.56 ಚ.ಮೀ. ವಿಸ್ತೀರ್ಣಕ್ಕೆ ರೂ.1,47,14,417/- ಗಳ ಪ್ಯಾಕೇಜ್‌ನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆ.ಐ.ಎ.ಡಿ.ಬಿ. ರವರಿಗೆ ಸಲ್ಲಿಸಿದ್ದು, ಪರಿಹಾರ ಪಾವತಿಸುವ ಕುರಿತು ದಿನಾಂಕ:06.01.2020 ರಂದು ಕೆ.ಐ.ಎ.ಡಿ. ಕಾಯ್ದೆ 1966ರ ಕಲಂ 29(2)ರನ್ವಯ ಖಾತೆದಾರರಿಗೆ ತಿಳುವಳಿಕೆ ಪತ್ರವನ್ನು ಜಾರಿಮಾಡಲಾಗಿದೆ.

ಅದರಂತೆ ನಾಗವಾರ ಗ್ರಾಮದ ಸರ್ವೆ ನಂ.135/1 ರ 100.66 ಚ.ಮೀ. ವಿಸ್ತೀರ್ಣಕ್ಕೆ ರೂ.1,47,14,417/- ಗಳನ್ನು ಖಾತೆದಾರರಾದ ಶ್ರೀಆರ್.ಚಂದ್ರಶೇಖರ್‌ಬಿನ್ ಕೃಷ್ಣಯ್ಯ ಇವರಿಗೆ ಪಾವತಿಸಲಾಗಿದೆ.

ನಾಗವಾರ ಗ್ರಾಮ ಸರ್ವೆ ನಂ 135/2 ರ 655.19 ಚ.ಮೀ. ವಿಸ್ತೀರ್ಣವನ್ನು ಡಾ|| ಬಾಲಾಜಿರಾವ್, ಮೆ|| ಲಕ್ಷ್ಮೀ ರಮಣ ಪೆಟ್ರೋ ಸರ್ವೀಸ್ ಇವರು ದಿನಾಂಕ:05.10.2004ರಲ್ಲಿ 25 ವರ್ಷಗಳ ಗುತ್ತಿಗೆ ಅವಧಿಗೆ ಪಡೆದಿದ್ದು, ಗುತ್ತಿಗೆ ಅವಧಿಯು ಮುಕ್ತಾಯಗೊಳ್ಳಲು ಇನ್ನೂ 9 ವರ್ಷ ಬಾಕಿ ಇರುತ್ತದೆ.

....2

ಸದರಿಯವರು ಭೂ ಪರಿಹಾರವನ್ನು ನೀಡಬೇಕೆಂದು ಕೋರಿ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಅರ್ಜಿ ಸಂಖ್ಯೆ: 16258-259/2019 ರಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ:14.01.2020ರಂದು ನೀಡಿದ ತೀರ್ಪಿನಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಯವರು ಭೂ ಪರಿಹಾರವನ್ನು ಭೂಮಾಲೀಕರು ಹಾಗೂ ಬಾಡಿಗೆದಾರರಿಗೆ ಹಂಚಿಕೆ ಮಾಡುವ ಕುರಿತು ಪರಸ್ಪರ ಒಪ್ಪಂದ ಇದ್ದಲ್ಲಿ, ಆ ರೀತಿ ಭೂ ಪರಿಹಾರವನ್ನು ವಿತರಿಸುವಂತೆ, ಇಲ್ಲವಾದಲ್ಲಿ ಕಾನೂನಿನಂತೆ ಮುಂದಿನ ಕ್ರಮ ಜರುಗಿಸಲು ಸೂಚಿಸಲಾಗಿರುತ್ತದೆ.

ಮಾನ್ಯ ಉಚ್ಛನ್ಯಾಯಾಲಯದ ಆದೇಶದಂತೆ ಉಭಯತ್ರರಿಗೂ ನೋಟೀಸ್ ನೀಡಿ, ವಿಚಾರಣೆ ನಡೆಸಿ, ಒಪ್ಪಂದದ ಐತೀರ್ಪು ರಚಿಸಲು ಸಾಧ್ಯವಾಗದ ಕಾರಣ, ಸಾಮಾನ್ಯ ಐತೀರ್ಪು ರಚಿಸಿ ರೂ.3,53,97,363/- ಗಳನ್ನು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ದಿನಾಂಕ:08.07.2020 ರಂದು ಜಮಾ ಮಾಡಲು ಪತ್ರ ಬರೆಯಲಾಗಿದ್ದು, ದಿನಾಂಕ:29.07.2020 ರಂದು ಠೇವಣಿ ಅಂಗೀಕರಿಸಿರುತ್ತಾರೆ. ಗುತ್ತಿಗೆದಾರರಾದ ಡಾ|| ಬಾಲಾಜಿರಾವ್.ಎ ರವರಿಗೆ ಪುನರ್ವಸತಿ ಭತ್ಯೆಯನ್ನು ಮಂಜೂರು ಮಾಡುವ ವಿಚಾರದಲ್ಲಿ ದಾಖಲಾತಿಗಳನ್ನು ಸಲ್ಲಿಸುವಂತೆ ಕೋರಿ ದಿನಾಂಕ:06.01.2020, 01.09.2020 ಮತ್ತು ದಿನಾಂಕ:09.09.2020 ರಂದು ನೋಟೀಸ್ ನೀಡಲಾಗಿ, ದಿನಾಂಕ:08.09.2020 ರಂದು ದಾಖಲಾತಿಗಳನ್ನು ಈ ಕಛೇರಿಗೆ ಸಲ್ಲಿಸಿದ್ದರ ಮೇರೆಗೆ, ಪುನರ್ವಸತಿ ಭತ್ಯೆಯನ್ನು ಮಂಜೂರು ಮಾಡಲು ಕ್ರಮವಹಿಸಲಾಗುತ್ತದೆ.

ಕಡತ ಸಂಖ್ಯೆ: ನಅಇ 205 ಪಿ.ಆರ್.ಜೆ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿಗಳು